'ಬಿಗ್ ಬೆನ್' ಎನ್ನುವುದು ಹೊರನೋಟಕ್ಕೆ ಎತ್ತರದ ಬುರುಜಿನಲ್ಲಿರುವ ದೊಡ್ಡದೊಂದು ಗಡಿಯಾರ. ಆದರೆ, ನಿಜದಲ್ಲಿ ವೇಳೆಯನ್ನು ಬಾರಿಸಿ ತಿಳಿಸಲು ನಿರ್ಮಿಸಿರುವ ಒಂದು ಅತಿದೊಡ್ಡ ಗಂಟೆ ಮತ್ತು ಅದರ ಜೊತೆಗಾರರಾದ ಇತರೆ ನಾಲ್ಕು ಸಣ್ಣ ಗಂಟೆಗಳು– ಇವೆಲ್ಲವೂ 'ಬಿಗ್ ಬೆನ್' ಎಂಬ ಗಡಿಯಾರದ ಹೆಸರಿನಲ್ಲಿ ಸೇರುತ್ತವೆ. ಈ ದೊಡ್ಡ ಗಡಿಯಾರ, ಅದಿರುವ ಸುಂದರ ಎಲಿಝಬೆತ್ ಟವರ್, ಅದನ್ನು ಹೊಂದಿರುವ ಅದ್ಭುತ ವಾಸ್ತುಶಿಲ್ಪದ ವೆಸ್ಟ್‌ಮಿನ್‌ಸ್ಟರ್ ಅರಮನೆ ಎಲ್ಲವೂ ಲಂಡನ್ ಮಹಾನಗರಿಯನ್ನು ಪ್ರತಿನಿಧಿಸುವ ಸಾಂಕೇತಿಕ ಕೇಂದ್ರಬಿಂದುಗಳು.

## ಬಿಗ್ ಬೆನ್ ಗಂಟೆಗಳ ವಿಶೇಷ

ವೆಸ್ಟ್‌ಮಿನ್‌ಸ್ಟರ್ ಎನ್ನುವ ಪ್ರಪಂಚದ ಅತಿ ಹಳೆಯ ಪ್ರಜಾತಂತ್ರದ ಪ್ರತಿನಿಧಿ ಕಟ್ಟಡದಲ್ಲಿರುವ 'ಬಿಗ್ ಬೆನ್' ಗಂಟೆ ಮತ್ತು ಗಡಿಯಾರಕ್ಕೆ 180 ವರ್ಷಗಳಾಗಿವೆ. 13ನೇ ಶತಮಾನದಿಂದಲೇ ಇಲ್ಲಿನ ಗಂಟೆಗಳ ಬಗ್ಗೆ ದಾಖಲೆಗಳಿವೆ. ಇದು ಹಲವು ಬಾರಿ ದುರಸ್ತಿಗೊಳಪಟ್ಟಿದೆ. ಮೊದಲನೇ ಬಿಗ್ ಬೆನ್ ಕೂಡ ವಿಫಲವಾಯಿತು. ಈಗಿರುವ ಬಿಗ್ ಬೆನ್ ಬುರುಜಿನ ಒಳಹೊಕ್ಕರೆ ಈ ಗಂಟೆಗಳು ಮತ್ತು ಈ ಗಡಿಯಾರ ನಡೆಯಲು 169 ವರ್ಷಗಳ ಹಿಂದೆ ತಯಾರು ಮಾಡಿದ ಯಂತ್ರೋಪಕರಣಗಳು, ಗಡಿಯಾರದ ಕರಾರುವಕ್ಕು ಕಾರ್ಯಕ್ಷಮತೆ, ಚರಿತ್ರೆ ಇವುಗಳೆಲ್ಲ ತಿಳಿಯುತ್ತವೆ. ಇವನ್ನೆಲ್ಲ ತಿಳಿದ ನಂತರ ತಲೆಯೆತ್ತಿ ನೋಡಿದರೆ ಬಿಗ್ ಬೆನ್ ಬರಿಯ ಗಡಿಯಾರ ಮತ್ತು ಗಡಿಯಾರವಿರುವ ಬುರುಜಾಗಿ ಮಾತ್ರ ಕಾಣಿಸುವುದಿಲ್ಲ!

'ಬಿಗ್ ಬೆನ್'ನ ಚರಿತ್ರೆ ಇಂಗ್ಲಿಷರ ಹಲವು ಮಹತ್ವಾಕಾಂಕ್ಷೆಗಳ ಸ್ವರೂಪವನ್ನು ಬಿಚ್ಚಿಡುತ್ತದೆ. ಇದನ್ನು ಸ್ಥಾಪಿಸಿದಾಗ ಈ ಗಡಿಯಾರವೇ ಇಡೀ ಪ್ರಪಂಚದಲ್ಲಿ ದೊಡ್ಡ ಗಡಿಯಾರವಾಗಿತ್ತು. ತನ್ನ ಗಾತ್ರ, ಸೌಂದರ್ಯ ಮತ್ತು ಕಾರ್ಯಕ್ಷಮತೆಗೆ ಪ್ರಸಿದ್ಧವಾಗಿತ್ತು. ಲಂಡನ್ ಎನ್ನುವ ನಗರದ ಹೆಸರನ್ನು ಪ್ರಪಂಚದ ನಕ್ಷೆಯಲ್ಲಿ ದೊಡ್ಡದಾಗಿ ಬರೆವ ಆಶಯವೇ ಈ ಬೃಹತ್ ಗಾತ್ರದ ಗಡಿಯಾರಕ್ಕೆ ಕಾರಣವಾಯಿತು. ಅದಕ್ಕಾಗಿ ಆಡಳಿತಗಾರರು ಹಣದ ಹೊಳೆಯನ್ನೇ ಹರಿಸಿ ತಮ್ಮ ದೇಶದ ಹಿರಿಮೆಯನ್ನು ಮೆರೆಯಲು ಮುಂದಾದರು.

ಪ್ರಪಂಚದ ಬಹುಭಾಗದಲ್ಲಿ ಚಕ್ರಾಧಿಪತ್ಯ ಹೊಂದಿದ್ದ ಬ್ರಿಟಿಷ್ ಸಾಮ್ರಾಜ್ಯದ ರಾಜಮನೆತನದ ಆಡಳಿತಕ್ಕಾಗಿ ಅನುಪಮ ಶೈಲಿಯಲ್ಲಿ ಕಟ್ಟಿದ ರಾಯಲ್ ವೆಸ್ಟ್‌ಮಿನ್‌ಸ್ಟರ್ ಪ್ಯಾಲೇಸ್ ಎನ್ನುವ ಕಟ್ಟಡವನ್ನು ಅಧಿಕೃತ ಅರಮನೆಯಾಗಿ ಬಳಸಲಾಗುತ್ತಿತ್ತು. ಆದರೆ, 16 ಅಕ್ಟೋಬರ್ 1834ರಲ್ಲಿ ನಡೆದ ಬೆಂಕಿ ಅನಾಹುತಕ್ಕೆ ಸಿಕ್ಕ ಈ ಅರಮನೆ ಅರೆಬರೆ ನಾಶವಾಯಿತು. ಕೆಲವು ಭಾಗಗಳು ಅಗ್ನಿಶಾಮಕ ದಳಗಳ ಕಾರ್ಯಾಚರಣೆಯಿಂದ ಉಳಿದವು. 1836ರಲ್ಲಿ ಈ ಅರಮನೆಯನ್ನು ಮತ್ತೆ ಕಟ್ಟಲು ಟೆಂಡರ್ ಕರೆಯಲಾಯ್ತು, ಚಾರ್ಲ್ಸ್ ಬ್ಯಾರಿ ಎನ್ನುವ ವಾಸ್ತುಶಿಲ್ಪಿಗೆ ಗುತ್ತಿಗೆ ದೊರಕಿತು. ಅವನಿಗಾಗಿ ಆಗಸ್ಟಿನ್ ಪುಗಿನ್ ಎನ್ನುವ ವಾಸ್ತುಶಿಲ್ಪಿ ಉತ್ತರ ಭಾಗದ ಕಟ್ಟಡದ ಮತ್ತು ಬುರುಜಿನ ನಿರ್ಮಾಣದ ಜವಾಬ್ದಾರಿ ಹೊತ್ತ. ಗೋಥಿಕ್ ಶೈಲಿಯ ವಾಸ್ತುಕಲೆಯನ್ನು ಇವರು ಮತ್ತೆ 'ವೆಸ್ಟ್ ಮಿನ್‌ಸ್ಟರ್' ಕಟ್ಟಡದ ಮೂಲಕ ಇಡೀ ಸಾಮ್ರಾಜ್ಯದ ಮುಖ್ಯ ವಾಸ್ತುಶಿಲ್ಪ ಮಾದರಿಯನ್ನಾಗಿಸಿದರು. ಆಗ ಉದಿಸಿದ ಕಲ್ಪನೆ ಗ್ರೇಟ್ ಬೆಲ್ ಅನ್ನು ಹೊತ್ತ ಬುರುಜನ್ನು ನಿರ್ಮಿಸುವುದು. ಈ ಬುರುಜನ್ನು ನಿರ್ಮಿಸಿದ ಮರು ವರ್ಷಗಳಲ್ಲಿ ಆಗಸ್ಟಿನ್ ಪುಗಿನ್ ಬುದ್ಧಿಮಾಂದ್ಯನಾಗಿ ಸತ್ತನಂತೆ. ಈ ವಿನ್ಯಾಸವನ್ನು ಚಾರ್ಲ್ಸ್ ಬ್ಯಾರಿಗೆ ತಯಾರು ಮಾಡಿದಾಗ ಅವನು ಹೀಗೆಂದು ಒಕ್ಕಣೆ ಬರೆದಿಟ್ಟನಂತೆ:

'ಹಿಂದೆ ನನ್ನ ಜೀವನದಲ್ಲಿ ಎಂದೂ ಪಡದಿದ್ದಷ್ಟು ಕಷ್ಟಪಟ್ಟು ಬ್ಯಾರಿಗಾಗಿ ಈ ವಿನ್ಯಾಸ ಸಿದ್ಧಗೊಳಿಸಿದ್ದೇನೆ ಮತ್ತು ಇದು ಅತ್ಯಂತ ಸುಂದರವಾದ್ದಾಗಿದೆ'.

ಬಿಗ್ ಬೆನ್ ಮತ್ತು ವೆಸ್ಟ್‌ಮಿನ್‌ಸ್ಟರ್ ಪ್ಯಾಲೇಸ್ ಎರಡೂ ನಿಜಕ್ಕೂ ಅತ್ಯಂತ ಸುಂದರವಾಗಿವೆ. ಗಡಿಯಾರದ ಮುಳ್ಳುಗಳು 23 ಅಡಿ ಅಗಲದ ಗೋಲದಲ್ಲಿ ಕುಳಿತಿವೆ. ಗೋಲವನ್ನು ಸುತ್ತುವರೆದ ಚಿನ್ನದ ಲೇಪದ ಕಟ್ಟಿದೆ. ಗಡಿಯಾರದ ಹಿನ್ನೆಲೆಯಲ್ಲಿ 312 ಒಪಾಲ್ ಗಾಜಿನ ತುಣುಕುಗಳಿವೆ. ಗಡಿಯಾರದ ಪ್ರತಿ ನಂಬರಿನ ತಳದಲ್ಲಿ 'ಓ ದೇವನೇ, ನಮ್ಮ ಮೊದಲನೇ ರಾಣಿ ವಿಕ್ಟೋರಿಯಾಳನ್ನು ಸುರಕ್ಷಿತವಾಗಿಡು' ಎನ್ನುವ ಲ್ಯಾಟಿನ್ ಭಾಷೆಯ ಪ್ರಾರ್ಥನೆಯಿದೆ.

ಗಡಿಯಾರದ ಲೋಲಕವನ್ನು ಗಾಳಿಯಿಂದ ಸುರಕ್ಷಿತವಾಗಿಡಬಲ್ಲ ಪೆಟ್ಟಿಗೆಯಲ್ಲಿಡಲಾಗಿದೆ. ಈ ಲೋಲಕದ ತೂಕವೇ 300 ಕೆ.ಜಿ., ಉದ್ದ 13 ಅಡಿಗಳಷ್ಟು ದೊಡ್ಡದು. ಗಡಿಯಾರವನ್ನು ನಡೆಸುವ ಯಂತ್ರಗಳಿಗಾಗಿ ಒಂದು ಕೋಣೆಯೇ ಇದೆ. ಈ ಯಂತ್ರಗಳು 5 ಟನ್ ತೂಗುತ್ತವೆ. ಈ ಗಡಿಯಾರಕ್ಕೆ ವಾರಕ್ಕೆ ಮೂರು ಬಾರಿ ಕೀ ಕೊಡಲಾಗುತ್ತದೆ. ಪ್ರತಿ ಬಾರಿ ಕೀ ಕೊಡಲು ಒಂದೂವರೆ ಗಂಟೆ ಹಿಡಿಯುತ್ತದೆ. ಗಡಿಯಾರದ ಪ್ರತಿ ಬಾರಿಯ ನಾದ ಬೇರೆಯಾಗಿರುತ್ತದೆ. ಕಾಲು ಗಂಟೆಗೆ ಬಾರಿಸುವ ನಾದ 'ಜಿ', 'ಎಫ್', 'ಇ' ಮತ್ತು 'ಬಿ' ಮ್ಯೂಸಿಕ್ ನೋಟ್‌ಗಳಲ್ಲಿರುತ್ತವೆ. ಪುನರಾವರ್ತಿತವಾಗದ 20 ನೋಟ್‌ಗಳನ್ನು 'ಇ' ಮೇಜರ್ ಸ್ಕೇಲಿನಲ್ಲಿ ನಾಲ್ಕು ಭಿನ್ನ ಶೈಲಿಯಲ್ಲಿ ಯಂತ್ರಗಳು ನುಡಿಸುತ್ತವೆ. ಹನ್ನೆರಡು ಗಂಟೆಗೆ ಬಿಗ್ ಬೆನ್ ಹನ್ನೆರಡು ಬಾರಿ ಹೊಡೆದುಕೊಳ್ಳುತ್ತದೆನ್ನಿ. ಅದರ ಜೊತೆಯಲ್ಲಿ ಇತರೆ ಗಂಟೆಗಳು ನುಡಿಸುವ ಸಂಗೀತವೂ ಕೇಳಿಬರುತ್ತದೆ. ಆದರೆ ಗಂಟೆಯನ್ನು ಸೂಚಿಸುವ ಮೊದಲ ಹೊಡೆತವನ್ನು ಬೇರೆ ಬೇರೆ ದಿನಗಳಲ್ಲಿ ನಾವು ಕಾಣುವ ಸೆಕೆಂಡುಗಳ ವ್ಯತ್ಯಾಸಕ್ಕೆ ಮರುಹೊಂದಿಸಿಕೊಂಡು ಈ ಗಡಿಯಾರ ನಡೆಯುವಂತೆ ಮಾಡಲಾಗಿದೆ. ಈ ವ್ಯತ್ಯಾಸವನ್ನು ಗ್ರೀನಿಚ್ ಮೀನ್ ಟೈಂ ಪ್ರಕಾರ ಹೊಂದಿಸಲಾಗಿದೆ. ಮುಂದಿನ ಹೊಡೆತ ಮತ್ತು ಕೊನೆಯ 6 ನೋಟ್‌ಗಳು ಒಂದಂಶ ವ್ಯತ್ಯಾಸ ತೋರಬಹುದು. ಈ ನಿನಾದವನ್ನೇ ಪ್ಯಾಲೇಸಿನ ನಾಲ್ಕೂ ದಿಕ್ಕುಗಳಲ್ಲಿ ಬಿತ್ತರಿಸುವ ಕಾರಣ ಹೆಚ್ಚು ಬಾರಿ ಗಂಟೆ ಹೊಡೆದಂತೆಯೂ ಕೇಳಿಸಬಹುದು.

ಗ್ರೇಟ್ ಬೆಲ್ ಆಗಿದ್ದ ಈ ಗಡಿಯಾರದ ಸಂಕೀರ್ಣಕ್ಕೆ 'ಬಿಗ್ ಬೆನ್' ಎನ್ನುವ ಹೆಸರು ಹೇಗೆ ಬಂತು, ಈ ಬೆನ್ ಎನ್ನುವ ವ್ಯಕ್ತಿ ಯಾರು ಎನ್ನುವ ಬಗ್ಗೆ ಯಾರಿಗೂ ನಿಖರವಾಗಿ ತಿಳಿದಿಲ್ಲ. ಸಾಮಾನ್ಯವಾಗಿ ಬೆನ್ ಎನ್ನುವುದು ಬೆಂಜಮಿನ್ ಎನ್ನುವ ಹೆಸರಿನ ಹ್ರಸ್ವ ಸ್ವರೂಪ. ಈ ಬುರುಜಿನ ನಿರ್ಮಾಣದ ಮೇಲುಸ್ತುವಾರಿಕೆ ನೋಡಿಕೊಳ್ಳುತ್ತಿದ್ದ ಸರ್ ಬೆಂಜಮಿನ್ ಹಾಲ್



ಲಂಡನ್ ನಗರದ
ಕಿರೀಟದಂತೆ ಕಂಗೊಳಿಸುವ
'ಬಿಗ್ ಬೆನ್'